ಹೋಟೆಲ್ ಕಾರ್ಮಿಕರು, ಆಟೋ ಮೊಬೈಲ್ ವರ್ಕ್‌ಶಾಪ್‌ಗಳ ಕಾರ್ಮಿಕರು ಹಾಗೂ ಗೃಹ ಕಾರ್ಮಿಕರು ಈ ವಲಯಗಳ ಅಸಂಘಟಿತ ಕಾರ್ಮಿಕರಿಗೆ ಅನುಷ್ಠಾನಗೊಳಿಸಿದೆ.

ಅಲ್ಲದೆ, ಈ ಕೆಳಕಂಡ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೆ ತರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

1. ನೋಂದಾಯಿತ ಮೃತ ಕಾರ್ಮಿಕರ ಅಂತ್ಯಕ್ರಿಯೆಗಾಗಿ ಧನಸಹಾಯ ಒದಗಿಸುವುದು.

2. ನೋಂದಾಯಿತ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಧನಸಹಾಯ.

3. ಕಾರ್ಮಿಕರು ಕೆಲಸ ಮಾಡುತ್ತಿದ್ದಾಗ ಅಪಘಾತಕ್ಕೀಡಾಗಿ ಮೃತರಾದರೆ ಅಥವಾ ಶಾಶ್ವತ ದುರ್ಬಲತೆ ಉಂಟಾದಲ್ಲಿ ಪರಿಹಾರ.

ಆ) ಪ್ರಸ್ತುತ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಹೊಸ ಪಿಂಚಣಿ (ಎನ್‌ಪಿಎಸ್ ಲೈಟ್–ಸ್ವಾವಲಂಭನ್) ಯೋಜನೆಯನ್ನು ದರ್ಜಿಗಳು, ಮಡಿವಾಳರು, ಹಮಾಲರು, ಆಟೋ, ಟ್ಯಾಕ್ಸಿ ಚಾಲಕರು ಹಾಗೂ ಖಾಸಗಿ ಲಾರಿ ಮತ್ತು ಬಸ್ ಚಾಲಕರು ಹಾಗೂ ನಿರ್ವಾಹಕರು, ಹೋಟೆಲ್ ಕಾರ್ಮಿಕರು, ಆಟೋ ಮೊಬೈಲ್ ವರ್ಕ್‌ಶಾಪ್‌ಗಳ ಕಾರ್ಮಿಕರು ಹಾಗೂ ಗೃಹ ಕಾರ್ಮಿಕರು ಈ ವಲಯಗಳ ಅಸಂಘಟಿತ ಕಾರ್ಮಿಕರಿಗೆ ಅನುಷ್ಠಾನಗೊಳಿಸಿದೆ.

ಮುಂದುವರೆದು ಎಲ್ಲಾ ಅಸಂಘಟಿತ ವಲಯಗಳ ಕಾರ್ಮಿಕರನ್ನು ಯೋಜನೆಯ ವ್ಯಾಪ್ತಿಗೆ ಸೇರಿಸಲು ದಿನಾಂಕ : 30–11–2011ರಂದು ಮಂಡಳಿಯು ತೀರ್ಮಾನಿಸಿದೆ. ಈ ಪ್ರಸ್ತಾವನೆಯು ಇದೀಗ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ನೋಂದಾಯಿತ ಅಸಂಘಟಿತ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಧನಸಹಾಯ ಒದಗಿಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಆದ್ದರಿಂದ ಈ ಯೋಜನೆಗೆ ಈ ತನಕ ಅನುದಾನ ಖರ್ಚಾಗಿರುವುದಿಲ್ಲ.

ಜಿ.ಎಸ್. ಪರಮಶಿವಯ್ಯರವರ ಯೋಜನೆ

405 (939) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) :– ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

ಅ) ಜಿ.ಎಸ್. ಪರಮಶಿವಯ್ಯರವರ ಯೋಜನೆಯ **D.P.R. (Detailed Project Report)** ಅನುಷ್ಠಾನ ಮಾಡಲು ದಿನಾಂಕ : 20–07–2011 ರಂದು ಆಡಳಿತಾತ್ಮಕ ಅನುಮೋದನೆ ಸಿಕ್ಕಿದ್ದರೂ ಸಹ ಇದುವರೆವಿಗೂ ಟೆಂಡರ್ ಕರೆಯದೇ ಇರಲು ಕಾರಣವೇನು;

ಆ) ಜಿ.ಎಸ್. ಪರಮಶಿವಯ್ಯರವರ ಯೋಜನೆ–1ರಲ್ಲಿ ಬೆಂಗಳೂರಿಗೆ 12 ಟಿ.ಎಂ.ಸಿ. ನೀರು ಅವಕಾಶ ಮಾಡಿಕೊಟ್ಟಿದ್ದು, ಇದನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಇರುವ ಅಡೆತಡೆಗಳೇನು ?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):–

ಅ) ಸರ್ಕಾರದ ಪತ್ರ ದಿನಾಂಕ : 02–12–2011ರಲ್ಲಿ ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯು ಈ ಕಾರ್ಯವನ್ನು ಕರ್ನಾಟಕ ನೀರಾವರಿ ನಿಗಮದ ಮೇಲುಸ್ತುವಾರಿಯಲ್ಲಿ ನಿಗಮದ ವತಿಯಿಂದ ಹಣಕಾಸನ್ನು ಒದಗಿಸಿಕೊಂಡು ಶೀಘ್ರದಲ್ಲಿ ಕೈಗೊಂಡು ಡಿ.ಪಿ.ಆರ್. ಅನ್ನು ತಯಾರಿಸಿ ಸಲ್ಲಿಸಲು ಸೂಕ್ತ ನಿರ್ದೇಶನವನ್ನು ನೀಡಲಾಯಿತು.

ಅದರಂತೆ, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಡಿ ಟೆಂಡರ್ ನೋಟಿಫಿಕೇಷನ್ ದಿನಾಂಕ : 02–12–2011 ರಂದು ಹೊರಡಿಸಲಾಗಿದೆ.

ಆ) ಮೇಲಿನಂತೆ, ಡಿ.ಪಿ.ಆರ್. ತಯಾರಿಸಿದ ನಂತರವೇ ನೀರಿನ ಪರಿಮಾಣ ಕುರಿತು ನಿಖರವಾಗಿ ತಿಳಿದುಬರುವುದರಿಂದ, ವಿವರ ಅಂದಾಜು ವರದಿ ತಯಾರಿಸಿದ ನಂತರ ಪರಿಶೀಲಿಸಬಹುದಾಗಿರುತ್ತದೆ.

ಬೆಳೆಗಳಿಗೆ ಹಾನಿ

406 (940) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) :– ಮಾನ್ಯ ಅರಣ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಕಾಡಾನೆಗಳ ಹಾವಳಿಯಿಂದಾಗಿ ಬೆಳೆಗಳಿಗೆ ಹಾನಿಯುಂಟಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಕಾಡಾನೆಗಳ ಹಾವಳಿ ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಕಾಡಾನೆಗಳ ಹಾವಳಿಯಿಂದ ಬೆಳೆ ನಾಶವಾಗಿರುವ ರೈತರಿಗೆ ಎಷ್ಟು ಪರಿಹಾರ ನೀಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;

ಈ) ಕಾಡಾನೆಗಳನ್ನು ಬೇರೆ ರಾಜ್ಯಗಳಿಗೆ ಸಾಗಿಸುತ್ತಿರುವುದಾಗಿ ತಿಳಿದಿದ್ದರು, ಅವುಗಳನ್ನು ರಾಜ್ಯದಲ್ಲಿಯೇ ಉಳಿಸಿ ಸಂರಕ್ಷಿಸಲು ಯಾವ ಕ್ರಮ ಕೈಗೊಳ್ಳಲಾಗುವುದು;

ಉ) ಇಲ್ಲಿಯವರೆಗೆ ಎಷ್ಟು ಕಾಡಾನೆಗಳನ್ನು ಸಂರಕ್ಷಿಸಲಾಗಿದೆ (ವಿವರ ನೀಡುವುದು)